ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನ್ಯಲ್ಪ ಮಟ್ಟಿಗೆ ಅದು ಕಾರಣ ಎಂದು ಒಪ್ಪಿಕೊಳ್ಳಬಹುದು.

ಶ್ರೀ ಜಿ. ನಾರಾಯಣಗೌಡರು.—ಸ್ವಂತ ಜವಾಬ್ದಾರಿ ಇರುವುದನ್ನು (personal liability) ಸಡಿಲ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ದಿನದಿಂದ ಅದು ಪರ್ಯಾಲೋಚನೆಯಲ್ಲಿದೆ. ಅದನ್ನು ತೆಗೆದು ಹಾಕುವುದರಿಂದ ಸ್ವಲ್ಪ ಕಷ್ಟಗಳು ಉದ್ಭವಿಸುತ್ತವೆ. ಅಂತೂ ಸರ್ಕಾರದವರು ಸಹಾನುಭೂತಿಯಿಂದ ಆಲೋಚನೆಮಾಡುತ್ತಾ ಇದ್ದಾರೆ. ಸದ್ಯದಲ್ಲೇ ಆರ್ಡರ್ ಜಾರಿ ಆಗಬಹುದು.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಈ ಸಾಲಗಳಿಗೆ ಬಂದ ಅರ್ಜಿಗಳು ಎಷ್ಟು ದಿನದಲ್ಲಿ ವಿಲೆ ಆಗಬೇಕೆಂದು ಇದೆ ?

The Hon'ble Sri H. SIDDAIYA.—As early as possible.

ಶ್ರೀ ಎ. ಸುಬ್ಬರಾಯಶೆಟ್ಟರು.—ಕಾಲದ ಮಿತಿಯಲ್ಲದೆ ವರ್ಷಗಟ್ಟಲೆ ವಿಲೇ ಆಗದೆ ಇರುವುದು ಇಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು, ಮೂರು ತಿಂಗಳಿನಲ್ಲೇ ವಿಲೇಆಗಿರುವುದು ಇದೆ. 6 ತಿಂಗಳಿಗೆ ಮೇಲ್ಪಟ್ಟು ಆಗಿರುವುದೂ ಇದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಈ ಅರ್ಜಿಗಳನ್ನು ಆದಷ್ಟು ಜಾಗ್ರತೆ ವಿಲೆಮಾಡುವುದರಿಂದ ರೈತರಿಗೆ ಅನುಕೂಲವಾಗುವುದಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕೆಸ್ಸಿನ್ಸ್ ನೋಡಿ ವಿಲೇಮಾಡಬೇಕಾಗುತ್ತದೆ. ಅದಕ್ಕೊಸ್ಕರ ಕೆಲವು ಕೇಸುಗಳಲ್ಲಿ ಸ್ವಾಭಾವಿಕವಾಗಿ ಕಾಲ ಬೇಕಾಗುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ತಾಲ್ಲೂಕು ಅಮಲ್ದಾರರೇ ಇದನ್ನು ವಿಲೇಮಾಡುವುದರಿಂದ ಅವರಿಗೆ ಸಾಧಾರಣವಾಗಿ ಎಲ್ಲಾ ಗೊತ್ತಿರುತ್ತದೆ. ಏಕೆ ಜಾಗ್ರತೆ ವಿಲೇಮಾಡಬಾರದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಹುಮಟ್ಟಿಗೆ ಕೆಲವುಕಾಲ ಒಬ್ಬ ಅಮಲ್ದಾರರು ಒಂದೇ ತಾಲ್ಲೂಕಿನಲ್ಲಿದ್ದರೆ ಹೆಚ್ಚು ವಿಷಯ ಗೊತ್ತಿರುತ್ತದೆ. ಇಲ್ಲದಿದ್ದರೆ ?

Villages included in Gudibanda Taluk

Q.—130. Sri A. SUBBARAYA SETTY (Kolar District—General).—

Will the Government be pleased to state :—

(*a*) when the Gudibanda Sub-Taluk was converted into a *Pucca* taluk ;

(*b*) which are the villages ordered to be included in it ;

(*c*) whether they have been included ;

(*d*) if not, the reasons therefor ;

(*e*) when this inclusion would be given effect to ?

A.—The Hon'ble Sri H. SIDDAIYA (Minister for Revenue and Excise).—

(*a*) 1st July 1947.

(*b*) and (*c*) The following villages are ordered to be included in it recently :—

Nagaragere Hobli (*Goribidnur Taluk*).

1. Bandaralahalli
2. Kamataralahalli
3. Makkammanahalli (Becharak).
4. Kothur
5. Kodihalli (K.G.)
6. Chikkamallenahalli
7. Chowlasettihalli
8. Naralahalli (J)
9. Mudlahalli (K.G.)
10. Chimukalahalli
11. Krishnarajapura (J.)
12. Payanahalli
13. Nagaragere
14. Pillaguttahalli (Becharak)
15. Matyavalahalli

Mandikal Hobli, Chikballapur Taluk.

1. Rampatna
2. Kambalahalli
3. Nagasanahalli
4. Madenahalli (Becharak)
5. Udigiri Nallappanahalli
6. Renumakalahalli
7. Bommaganahalli
8. Chokkanahalli
9. Yenumala Channana Dinne (B).
10. Kommalamri
11. Ropparalahalli (Becharak)
12. Siddaganahalli (Jodi)
13. Karakamakalahalli
14. Chikkanareppanahalli

(Orders are under issue).

(*d*) Does not arise.

(*e*) From 1st January 1952.

ಶ್ರೀ ಎ. ಸುಬ್ಬರಾಯಶೆಟ್ಟರು.—(*a*) ಪ್ರಶ್ನೆಗೆ ಉತ್ತರವಾಗಿ 1947ರಲ್ಲಿ ಮಾರ್ಪಡಿಸರಾಯಿತು ಎಂದು ಹೇಳಿದ್ದೀರಿ ಆಗ ಎಷ್ಟು ಗ್ರಾಮಗಳನ್ನು ಇದಕ್ಕೆ ಸೇರಿಸಬೇಕೆಂದು ಆರ್ಡರ್ ಆಗಿತ್ತು ?

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—78 ಗ್ರಾಮಗಳು.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವು ಎಷ್ಟು ಹೋಬಳಿಗಳಿಗೆ ಸಂಬಂಧಪಟ್ಟ ಗ್ರಾಮಗಳು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಹೋಬಳಿಗೆ ಸಂಬಂಧಪಟ್ಟವು.

ಶ್ರೀ ಎ. ಸುಬ್ಬರಾಯಶೆಟ್ಟರು.—29 ಗ್ರಾಮಗಳನ್ನು ಮಾತ್ರ ಸೇರಿಸಿದ್ದೀರಿ. ಅದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಷ್ಟು ಗ್ರಾಮಗಳು ಸಾಕು ಎಂಬುದಾಗಿ ಸಬ್‌ಡಿವಿಜ಼ನ್ ಆಫೀಸರು, ಡೆಪ್ಯುಟಿಕಮಿಷನರು, ರೆವಿನ್ಯೂ ಆಫೀಸರು ಅಭಿಪ್ರಾಯಪಟ್ಟಿದ್ದಾರೆ. ಮುಖ್ಯವಾದ ಕಾರಣ ಈ 29 ಗ್ರಾಮಗಳು ಗುಡ್ಡಕ್ಕೆ ಈಚೆಗೆ ಇವೆ. ಬಾಕಿ ಗ್ರಾಮಗಳು ಗುಡ್ಡಪ್ರದೇಶದ ಆಚೆಗೆ ಇರುವುದರಿಂದ ಅವುಗಳನ್ನು ತೆಗೆದುಕೊಂಡರೆ ತೊಂದರೆಯಾಗುತ್ತದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಈ 78 ಗ್ರಾಮಗಳನ್ನು ಸೇರಿಸುವ ಬಗ್ಗೆ ನೋಟಿಫೈ ಆಗಿದ್ದು ತಕರಾರುಗಳು ಬಂದಿದ್ದುವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟಿಫೈ ಆಗಿತ್ತು ; ಫೆಬ್ರುವರಿ 1947ನೇ ಇಸವಿಯಲ್ಲಿ ಆರ್ಡರ್ ಮಾಡಿದ್ದರು. ಆಪಾದನಂತರ ಆಯಾಯ ಗ್ರಾಮಸ್ಥರು ತಕರಾರು ಮಾಡಿದ್ದಾರೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಹಾಗಾದರೆ ಈ 29 ಗ್ರಾಮಗಳಲ್ಲದೆ ಬೇರೆ ಗ್ರಾಮಗಳನ್ನು ಸೇರಿಸುವ ಆಲೋಚನೆ ಇದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮೊನ್ನೆ ತಾನೆ ಆರ್ಡರ್ ಆಗಿದೆ. ಸದ್ಯಕ್ಕೆ 29 ಗ್ರಾಮಗಳನ್ನು ಸೇರಿಸಿದರೆ ಸಾಕು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).— ಇದಕ್ಕೆ ಸೇರಿಸಲಾಗುವ ಹಳ್ಳಿಗಳವರ ಅಭಿಪ್ರಾಯ ಪಡೆದಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರ ಅಭಿಪ್ರಾಯ ಪಡೆದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕೆಲವು ಗ್ರಾಮಗಳವರು ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಸೇರಿಸಬೇಕೆಂದು ಅಭಿಪ್ರಾಯಪಟ್ಟಿದ್ದರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ಆ ರೀತಿ ಅಭಿಪ್ರಾಯಪಟ್ಟಿದ್ದರು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪರ್ಯಾಲೋಚನೆ ಮಾಡಿದನಂತರವೇ ಆ ರೀತಿ ಆರ್ಡರ್ ಆಗಿದೆ.

Feeder Channel to and water supply from Vishnusamudra Tank.

Q.—60. Sri K. H. MUDIYAPPA (Chikmagalur District—General).—

Will the Government be pleased to state :—

(*a*) the capacity of water storage in Vishnusamudra Tank of Keresante, Kadur Taluk ;

(*b*) (i) the number of acres of land to which water is supplied from this tank at present ;

(ii) the number of channels through which it is supplied ; which they are ;

(iii) the present condition of these channels ;

(*c*) whether a request has been made for the construction of a feeder channel to this tank from Devanur Tank ;

(*d*) the amount that may have to be spent for the construction of a feeder channel from Devanur Tank to Vishnusamudra Tank ?

A.—The Hon'ble Sri T. MARIAPPA (Home Minister).—

(*a*) 3,275 units.

(*b*) (i) 530 acres.

(ii) One channel, *viz.*, Left Bank Channel.

(iii) The Left Bank channel is in good condition. The Right Bank channel is not in service.

(*c*) Yes.

(*d*) Rs. 1,00,000 approximately.

ಶ್ರೀ ಕೆ. ಎಚ್. ಮುದಿಯಪ್ಪನವರು.—ಒಂದು ಯೂನಿಟ್ ನೀರನ್ನು ಎಷ್ಟು ಎಕರೆ ಸಾಗುವಳಿಗೆ ಕೊಡಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ಯೂನಿಟ್‌ಗೆ ಒಂದು ಎಕರೆಯಂತೆ ಲೆಕ್ಕ ಇದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ 530 ಎಕರೆಗಳಿಗೆ ಮಾತ್ರ ಕೊಟ್ಟಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು:—ಆ ಕೆರೆಗೆ ಅಷ್ಟು ನೀರು ತುಂಬುವಷ್ಟು capacity ಇದೆ ; ಆದರೆ ನೀರಿಲ್ಲ. ಅದಕ್ಕೆ ಇರುವಷ್ಟನ್ನು ಮಾತ್ರ ಒದಗಿಸಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಕಾಲುವೆಗಳು ದುರಸ್ತಿನಲ್ಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದು ದುರಸ್ತಿನಲ್ಲಿದೆ. ಇನ್ನೊಂದು ದುರಸ್ತಿನಲ್ಲಿಲ್ಲ. ಅದು 1910ನೇ ಇಸವಿಯಿಂದಲೇ ದುರಸ್ತಿನಲ್ಲಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—530 ಎಕರೆ ಇರುವುದು ಒಂದು ಕಾಲುವೆ ಕೆಳಗೆ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಡದಡದ ನಾಲೆಯಿಂದ ಸರಬರಾಯಿ ಆಗುತ್ತಿದೆ ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಬಲದಡದ ನಾಲೆಯು ಉಪಯೋಗದಲ್ಲಿಲ್ಲ ಎಂದು ಹೇಳಿದ್ದೀರಿ. ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಾರಣ ಅದರಲ್ಲಿ ನೀರಿಲ್ಲ. ಅದು ಎತ್ತರದ ಮಟ್ಟದಲ್ಲಿದೆ. ಕೆರೆಯಲ್ಲಿ ಪೂರ್ತಿ ನೀರು ತುಂಬಬೇಕು. ಆಗ ಎತ್ತರದ ಮಟ್ಟದಿಂದ ನೀರನ್ನು ಹಾಯಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಹಾಗಾದರೆ ಕೆರೆಯಲ್ಲಿ ಎಷ್ಟು ಯೂನಿಟ್ ನೀರಿದೆ ?